NAME OF THE NEWS PAPER:
DATE 29/12/2017
DEPARTMENT :

# ಪರಿಹಾರ ವಿಚಾರದಲ್ಲಿ ಯೂ ಟರ್ನ್ ಮಾಡಿಲ್ಲ

## ಗಲಭೆ ಪೂರ್ವ ಯೋಜಿತವೆಂದು ಸಾಬೀತಾಗಿದ್ದು, ಕಾನೂನಾತ್ಮಕ ಪರಿಹಾರಕ್ಕೆ ತಡೆ : ಶೋಭಾ ಕರಂದ್ಲಾಜೆ

ಬೆಂಗಳೂರು: ಮಂಗಳೂರಿನಲ್ಲಿ ಪೊಲೀಸರ ಗುಂಡಿಗೆ ಬಲಿಯಾದವರಿಗೆ ಪರಿಹಾರ ವಿತರಣೆ ವಿಚಾರದಲ್ಲಿ 'ಯೂ ಟರ್ನ್' ಮಾಡಿಲ್ಲ, ಸಾರ್ವಜನಿಕರಲ್ಲಿ ವಿನಂತಿ ಮಾಡಿದಾಗ ಸಾವಿರಾರ ವಿಡಿಯೋ ದೃಶ್ಯಾವಳಿಗಳು ಬಂದಿದ್ದವು. ಅದನ್ನು ಆಧರಿಸಿ ಗಲಭೆ ಪೂರ್ವ ಯೋಜಿತವೆಂಬುದು ಸಾಬೀತಾಗಿದ್ದು, ಕಾನೂನಾತ್ಮಕ ಪರಿಹಾರವನ್ನು ತಡೆ ಹಿಡಿಯಲಾಗಿದೆ ಎಂದು ಸಂಸದೆ ಶೋಭಾ ಕರಂದ್ಲಾಜೆ ಹೇಳಿದರು.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಅವರು ಆರೋಪಿಸಿರುವಂತೆ ವರಿಷ್ಠರು ಪರಿಹಾರ ನೀಡದಂತೆ ಯಾವುದೇ ಸೂಚನೆ ನೀಡಿಲ್ಲ, ಗಲಭೆ ವಿಚಾರದಲ್ಲಿ ನಮಗೂ ಸತ್ಯಾಂಶ ಗೊತ್ತಿರಲಿಲ್ಲ, ಮೃತಪಟ್ಟವರು ಬೇರೆಡೆ ಕೆಲಸ ಮಾಡುತ್ತಿದ್ದರೂ ಅಲ್ಲಿಗೇಕೆ ಬಂದಿದ್ದರು ಎಂಬ ಬಗ್ಗೆಯೂ ತನಿಖೆಯಾಗಬೇಕು. ಹಾಗಾಗಿ ಪರಿಹಾರವನ್ನು ತಡೆಹಿಡಿಯಲಾಗಿದೆ ಎಂದರು.

ಮೃತಪಟ್ಟವರಿಗೆ ಕೇರಳ, ಪಶ್ಚಿಮ ಬಂಗಾಳ ಸರ್ಕಾರ ಪರಿಹಾರ ಘೋಷಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಶೋಭಾ ಕರಂದ್ಲಾಜೆ, ಕೇರಳ, ಪಶ್ಚಿಮ ಬಂಗಾಳದಲ್ಲಿ ಮೃತಪಟ್ಟವರ ಪೈಕಿ ಎಷ್ಟು ಮಂದಿಗೆ ಆ ಸರ್ಕಾರಗಳು ಪರಿಹಾರ ನೀಡಿವೆ ಎಂಬುದನ್ನು ನೋಡಿಕೊಳ್ಳಲಿ. ಪರಿಹಾರದಲ್ಲೂ ಜಾತಿ, ಧರ್ಮ ಪರಿಗಣಿಸುವಂತಾದರೆ ಹೇಗೆ? ರಾಜ್ಯದ ಘಟನೆಗೂ ಆ ರಾಜ್ಯಗಳಿಗೂ ಏನು ಸಂಬಂಧ ಎಂದು ಪ್ರಶ್ನಿಸಿದರು. ಮಂಗಳೂರಿನಲ್ಲಿ ಮೃತಪಟ್ಟವರ ಬಗ್ಗೆ ಸಿದ್ದರಾಮಯ್ಯ ಅವರು ಬಹಳ ಕನಿಕರ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ಕಾಯ್ದೆ ಬೆಂಬಲಿಸಿ ನಡೆದ ಸಭೆಯಲ್ಲಿ ಪಾಲ್ಗೊಂಡು ಹಿಂತಿರುಗುತ್ತಿದ್ದ ವರುಣ್ ಎಂಬುವರಿಗೆ ಇರಿಯಲಾಗಿದೆ. ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿಯವರು ಅಲ್ಲಿ ಏಕೆ ಹೋಗಲಿಲ್ಲ? ಕೇಂದ್ರ, ರಾಜ್ಯ ಸರ್ಕಾರ ಹಾಗೂ ಬಹುಸಂಖ್ಯಾತರ ವಿರುದ್ಧ ಅಲ್ಪಸಂಖ್ಯಾತರನ್ನು ಎತ್ತಿ ಕಟ್ಟುವ ಅವರು ಹಿಂದೂ ಯುವಕನಿಗೆ ಇರಿತವಾದರೆ ಯಾಕೆ ಸ್ಪಂದಿಸುವುದಿಲ್ಲ? ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬಂತೆ ಸಮಾಜಕ್ಕೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರು ವಿದೇಶಕ್ಕೆ ತೆರಳಿ ವೀಸಾ ಅವಧಿ ಮುಗಿದ ಬಳಿಕ ಸ್ವಲ್ಪ ದಿನ ಅಲ್ಲಿ ಉಳಿಯಲಿ. ಆಗ ಅವರಿಗೆ ಪರಿಸ್ಥಿತಿ ಅರಿವಾಗುತ್ತದೆ. ಭಾರತಕ್ಕೆ ಹೇಗೆಲ್ಲಾ ನುಸುಳಿ ಬರುತ್ತಿದ್ದಾರೆ ಎಂಬುದು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗವಾಗಿದೆ. ಭಾರತ ಧರ್ಮಛತ್ರವಲ್ಲ, ಧರ್ಮಛತ್ರವಾಗಲು ಬಿಡುವುದೂ ಇಲ್ಲ ಎಂದು ಹೇಳಿದರು.

**ಕೇರಳದಲ್ಲಿ ಕಾನೂನೇ ಇಲ್ಲ:** ಕೇರಳದಲ್ಲಿ ಸಿಎಂ ಯಡಿಯೂರಪ್ಪ ಅವರಿಗೆ ಪ್ರತಿರೋಧ ವ್ಯಕ್ತವಾದ ಬಗ್ಗೆ ಪ್ರತಿಕ್ರಿಯಿಸಿ, ಕೇರಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯೇ ಇಲ್ಲ, ತಿರುವನಂತಪುರದಲ್ಲಿ ಮುಖ್ಯಮಂತ್ರಿಗಳಿಗೆ ಕಪ್ಪು ಪಟ್ಟಿ ತೋರಿದ ಘಟನೆ ನಡೆದಿತ್ತು. ಹಾಗಾಗಿ ಮರುದಿನ ಕಣ್ಣೂರಿನಲ್ಲಿ ಇನ್ನಷ್ಟು ಭದ್ರತೆ ನೀಡಬಹುದಿತ್ತು. ಪೊಲೀಸರು ಸೈಲೆಟ್ ವಾಹನವನ್ನು ಯಾಕೆ ತಡೆದರೋ ಗೊತ್ತಿಲ್ಲ. ಅಲ್ಲಿನ ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲದ ಕಾರಣ ಇದೆಲ್ಲಾ ಗೊತ್ತಾಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಸಮಾನ ವೇದಿಕೆಗೆ ಬರಲಿ:** ಕಾಯ್ದೆಯಿಂದ ಮುಸ್ಲಿಮರಿಗೆ ಯಾವ ರೀತಿ ತೊಂದರೆಯಾಗಿದೆ ಎಂದು ಹೇಳಲು ಸಮಾನ ವೇದಿಕೆಗೆ ಬರಲಿ, ನಾವು ಚರ್ಚೆಗೆ ಸಿದ್ಧರಿದ್ದೇವೆ. ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್)ಯನ್ನು ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲೇ 2010ರಲ್ಲಿ ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿ ಅದಕ್ಕಾಗಿ 300 ಕೋಟಿ ರೂ. ಕಾಯ್ದಿರಿಸಿತ್ತು. ಜನಗಣತಿಗೂ ಮೊದಲು ಎನ್‌ಪಿಆರ್ ನಡೆಸಲಾಗುತ್ತದೆ. ಇದೀಗ ಕೇರಳ, ಪಶ್ಚಿಮ ಬಂಗಾಳ ಸರ್ಕಾರ ಎನ್‌ಪಿಆರ್‌ಗೂ ಪ್ರತಿರೋಧ ತೋರುತ್ತಿದ್ದು, ಇದನ್ನು ಯಾವ ದ್ರೋಹದ ಪಟ್ಟಿಗೆ ಸೇರಿಸಬೇಕೋ ಗೊತ್ತಾಗುತ್ತಿಲ್ಲ ಎಂದರು.

### ಮೈಸೂರಿಗೆ ಹೋಗದೇ ಇರುತ್ತಾರಾ?



ಶೋಭಾ ಕರಂದ್ಲಾಜೆ ಅವರು ಮಂಗಳೂರಿಗೆ ಭೇಟಿ ನೀಡಿದ್ದು ಏಕೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ನಾನು ಹುಟ್ಟಿದ್ದು, ಬೆಳೆದಿದ್ದು, ಓದಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಈಗಲೂ ಅಲ್ಲಿ ನಮ್ಮ ಮನೆಯಿದ್ದು, ಸಂಬಂಧಿಗಳಿದ್ದಾರೆ. ಚುನಾವಣೆಗಾಗಿ ಬೇರೆ ಕ್ಷೇತ್ರಕ್ಕೆ ಹೋಗಿದ್ದೇನೆ. ಸಿದ್ದರಾಮಯ್ಯ ಅವರು ಬಾದಾಮಿ ಕ್ಷೇತ್ರ ಪ್ರತಿನಿಧಿಸುತ್ತಿದ್ದು, ಮೈಸೂರಿಗೆ ಹೋಗಬೇಡಿ ಎಂದರೆ ಹೋಗದೇ ಇರುತ್ತಾರೆಯೇ ಎಂದು ಶೋಭಾ ಕರಂದ್ಲಾಜೆ ಪ್ರಶ್ನಿಸಿದರು. ಮಂಗಳೂರಿನ ಬಂದರು ಪ್ರದೇಶ ಹೇಗಿದೆ ಎಂಬ ಬಗ್ಗೆ ನನಗೆ ಸ್ಪಷ್ಟ ಅರಿವಿದೆ. ಪೊಲೀಸ್ ಠಾಣೆಗೆ ನಾಲ್ಕು ರಸ್ತೆ ಬಿಟ್ಟರೆ ಬೇರೆ ಸಂಪರ್ಕ ರಸ್ತೆ ಇಲ್ಲ. ದುಷ್ಕರ್ಮಿಗಳು ರಸ್ತೆಗಳನ್ನು ತಡೆದು ಠಾಣೆಯ ಶಸ್ತ್ರಾಗಾರದ ಒಂದು ಬಾಗಿಲು ಒಡೆದು ಮತ್ತೊಂದು ಬಾಗಿಲು ಮುರಿಯಲು ಯತ್ನಿಸಿದ್ದಾರೆ. ಒಂದೊಮ್ಮೆ ಶಸ್ತ್ರಾಗಾರದ ಬಾಗಿಲು ಮುರಿದಿದ್ದರೆ 3000 ಗುಂಡು, 40- 45 ಬಂದೂಕುಗಳು ದುಷ್ಕರ್ಮಿಗಳ ಕೈಗೆ ಸಿಕ್ಕಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂದು ಪ್ರಶ್ನಿಸಿದರು.

### ನೈತಿಕತೆ ಕುಗ್ಗಿಸುವ ಕೆಲಸ

ಒಂದು ಕೋಮಿನವರು ಹೆಚ್ಚಾಗಿರುವ ಪ್ರದೇಶದಲ್ಲಿ ಕಾಂಗ್ರೆಸ್‌ನ ಯು.ಟಿ. ಖಾದರ್ ಅವರು ರಾಜ್ಯಕ್ಕೆ ಬೆಂಕಿ ಬೀಳುತ್ತದೆ ಎಂದರು. ಬಳಿಕ 24 ಗಂಟೆಯಲ್ಲಿ ಗಲಭೆಯಾಯಿತು. ನಾನಾ ಅಪರಾಧ ಕೃತ್ಯಗಳಲ್ಲಿ ಜೈಲು ಸೇರಿದ್ದ ಪಿಎಫ್ಐ ಸಂಘಟನೆಯವರ ವಿರುದ್ಧದ 145, ಕೆಎಫ್‌ಡಿ ವಿರುದ್ಧದ 45 ಪ್ರಕರಣ ಹಿಂಪಡೆದು 1600 ಮಂದಿಯನ್ನು ಸಿದ್ದರಾಮಯ್ಯ ಸರ್ಕಾರ ಅವಧಿಯಲ್ಲಿ ಬಿಡುಗಡೆ ಮಾಡಲಾಯಿತು. ಸಿದ್ದರಾಮಯ್ಯ ಅವರು ಮಾಡಿದ ತಪ್ಪಿಗೆ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಪೊಲೀಸರೇ ತಪ್ಪು ಮಾಡಿದ್ದಾರೆ ಎಂಬಂತೆ ಸಿದ್ದರಾಮಯ್ಯ ಮಾತನಾಡುತ್ತಾರೆ. ಆ ಮೂಲಕ ಪೊಲೀಸರ ನೈತಿಕತೆಯನ್ನು ಕುಗ್ಗಿಸುವ ಕೆಲಸ ಮಾಡಲಾಗುತ್ತಿದೆ. ಎಂದು ಶೋಭಾ ಕರಂದ್ಲಾಜೆ ಅಸಮಾಧಾನ ವ್ಯಕ್ತಪಡಿಸಿದರು.

### ಪರಿಹಾರ ಹಿಂದೆಗೆತದ ಕಾರಣ ತಿಳಿಸಲಿ: ಯು.ಟಿ.ಖಾದರ್



ಮಂಗಳೂರು: ಗೋಲಿಬಾರ್‌ನಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಘೋಷಣೆ ಮಾಡಿರುವ ಪರಿಹಾರವನ್ನು ಏಕೆ ಹಿಂಪಡೆಯಲಾಗಿದೆ ಎಂಬುದನ್ನು ಮುಖ್ಯಮಂತ್ರಿಯವರು ಜನತೆಗೆ ತಿಳಿಸಬೇಕು. ಇದು ಕೇವಲ ಪರಿಹಾರದ ವಿಷಯವಲ್ಲ, ನೊಂದವರಿಗೆ ನ್ಯಾಯವೂ ದೊರೆಯಬೇಕಿದೆ ಎಂದು ಶಾಸಕ ಯು.ಟಿ. ಖಾದರ್ ಹೇಳಿದರು. ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪರಿಹಾರ ಘೋಷಣೆ ಮಾಡಿದ ಬಳಿಕ ಯಾರದೋ ಮಾತು ಕೇಳಿ ಹಿಂಪಡೆದಿರುವುದಾಗಿ ಮುಖ್ಯಮಂತ್ರಿ ಹೇಳಿಕೆ ನೀಡಿರುವುದು ಜಿಲ್ಲೆಯ ಜನರಿಗೆ ನೋವು ತಂದಿದೆ. ಸಾವಿನ ಮನೆಯಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದರು. ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲರ ಸಭೆ ಕರೆದು ಧೈರ್ಯ ತುಂಬುವ ಕೆಲಸ ಮಾಡಬೇಕು. ಸರ್ಕಾರ ಕಣ್ಣುಮುಚ್ಚಾಲೆ ಮಾಡುತ್ತಿದೆ. ತಪ್ಪಿತಸ್ಥರು ಯಾರೇ ಆಗಿರಲಿ, ನ್ಯಾಯಾಂಗ ತನಿಖೆ ನಡೆಯಲಿ ಎಂದವರು ಆಗ್ರಹಿಸಿದರು. ಮಂಗಳೂರು ಗಲಭೆ ಪ್ರಕರಣಕ್ಕೆ ಸಂಬಂಧಿಸಿ ತಮಗೆ ಬೇಕಾದಂತೆ ವಿಡಿಯೋ ಫೂಟೇಜ್ ಬಿಡುಗಡೆ ಮಾಡಲಾಗುತ್ತಿದೆ. ಗಲಭೆ ವಿಚಾರದಲ್ಲಿ ಸರ್ಕಾರ ಗೊಂದಲ ಉಂಟು ಮಾಡುತ್ತಿದೆ ಎಂದವರು ಹೇಳಿದರು.